ನಿಮ್ಮೊಂದಿಗೆ ತುಂಬಾ ಮಾತನಾಡಿದೆ. ನಿಮ್ಮಿಂದ ಬೇರೆಯಾಗಿಯೇ ಏನಾದರು ಮಾಡಬಹುದು. ನಿಮ್ಮ ಜೀವನ ಸಾರ್ವಜನಿಕರಿಗೆ ಮುಡುಪಾಗಿದೆ, ಆದರೆ ನಿಮ್ಮ ಜೀವನ ಸಹ ಯಾರಿಂದ ಮುಚ್ಚುಮರೆಯಾಗಿಲ್ಲ. ಈಗ ನನ್ನ ಬಗ್ಗೆ ಅಕಸ್ಮಾತ್ ಸಂಭವಿಸಿದ ಈ ಪರಿವರ್ತನೆಗೆ ಕಾರಣಗಳನ್ನು ತಿಳಿಯಲು ನಿಮ್ಮನ್ನು ಜನ ಪ್ರಶ್ನಿಸುತ್ತಾರೆ. ಈ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು ನಾನು ನಿಮಗೆ ಈ ಬಹಿರಂಗ ಪತ್ರವನ್ನು ಬರೆಯುವುದು ಉಚಿತವೆಂದು ತಿಳಿದಿದ್ದೇನೆ.

ನಮ್ಮ ಅಭಿಪ್ರಾಯ ಭೇದಗಳು ಹೊಸದೇನಲ್ಲ, ಇದು ಹತ್ತು ವರ್ಷಗಳ ಹಿಂದಿನದು. ನಮಗೇನು ಶಿಕ್ಷಣ ಸಿಗಬೇಕಿತ್ತೋ, ಅದನ್ನು ನೀವು ನನಗೆ ಮತ್ತು ನನ್ನ ಸಹೋದರರಿಗೆ ಕೊಟ್ಟಿದ್ದೀರ ಎಂದು ನೀವು ತಿಳಿಯುತ್ತೀರ. ಆದರೆ ನೀವು ತಿಳಿದೋ ತಿಳಿಯದೆಯೋ ನಮ್ಮ ಬಗ್ಗೆ ಗಮನವನ್ನೇ ಕೊಟ್ಟಿಲ್ಲವೆಂದು ನಾನು ತಿಳಿದಿದ್ದೇನೆ. ನಾನು, ಹತ್ತು ವರ್ಷಗಳಿಂದ ನಿಮ್ಮೆದುರು ನನ್ನ ದುಃಖವನ್ನು ಹೇಳಿಕೊಳ್ಳುತ್ತಿದ್ದೇನೆ, ಆದರೆ ನೀವು ನಮ್ಮ ಭಾವನೆಗಳ ಬಗ್ಗೆ ಎಂದೂ ಗಮನವನ್ನೇ ಕೊಡಲಿಲ್ಲ. ನೀವು ಸದಾ ನಮ್ಮನ್ನು ಆಯುಧವಾಗಿಯೇ ಬಳಸಿದ್ದೀರ.

ಸರ್ಕಸ್‌ನ ರಿಂಗ್ ಮಾಸ್ಟರ್ ತಮ್ಮ ಪ್ರಾಣಿಗಳೊಂದಿಗೆ ವರ್ತಿಸುವಂತೆ ನೀವು ನಮ್ಮೆಲ್ಲಾ ಸಹೋದರರ ಬಗ್ಗೆ ವರ್ತಿಸಿದ್ದೀರ. ತಾನು ಪ್ರಾಣಿಗಳ ಪಾಶವಿಕ ಪ್ರವೃತ್ತಿಯನ್ನು ದೂರ ಮಾಡಬಲ್ಲೆ ಎಂದು ರಿಂಗ್ ಮಾಸ್ಟರ್ ತಿಳಿಯುತ್ತಾನೆ. ನೀವು ನಮ್ಮನ್ನು ಸುಧಾರಣೆ ಮಾಡುವ ನೆಪದಲ್ಲಿ, ನಮ್ಮನ್ನು ಹತ್ತಿಕ್ಕಿದ್ದೀರ. ನಿಮಗಿಂತ ಭಿನ್ನ ಅಭಿಪ್ರಾಯವನ್ನು ಹೊಂದಿರುವ ಮುಗ್ಧರನ್ನೂ ಸಹ ನೀವು ಮೂರ್ಖರೆಂದು ತಿಳಿದಿರಿ. ನೀವೆಂದೂ ನಮ್ಮೊಂದಿಗೆ ಪ್ರೀತಿಯಿಂದ ಮಾತನಾಡಲಿಲ್ಲ, ಪ್ರತಿಯಾಗಿ ಸದಾ ಸಿಟ್ಟಿನಿಂದಲೇ, 'ನಿನಗೆ ಬುದ್ಧಿ ಇಲ್ಲ.. ನಿನಗೆ ಒಳ್ಳೆಯದು ಹೊಳೆಯುವುದೇ ಇಲ್ಲ...ನಿನ್ನ ಸಂಸ್ಕಾರದಂತೆ...' ಎಂದು ಮಾತನಾಡಿದ್ದೀರಿ. ಇಂಥ ತುಚ್ಛ ಭಾವನೆಯಿಂದ ನಮ್ಮನ್ನು ಹದ್ದು ಬಸ್ತಿನಲ್ಲಿಟ್ಟಿದ್ದೀರ. ನಿಮ್ಮ ಹೃದಯ ವಜ್ರದಂತೆ...ನಿಮ್ಮಲ್ಲಿ ನಾನು ಪ್ರೀತಿಯ ಬುಗ್ಗೆಯನ್ನು ನೋಡಿಯೇ ಇಲ್ಲ. ಹೀಗಾಗಿ ಏನು ಹೇಳಲಿ?

ನಿಮ್ಮ ವಿಚಾರಗಳು ಬದಲಾದಂತೆಯೇ ನೀವು ನನ್ನ ಜೀವನದ ಬಗ್ಗೆ ರೇಗುತ್ತಾ ಹೋದಿರಿ. ನನಗೆ ಬುದ್ಧಿ ಇಲ್ಲದಿರಬಹುದು, ಆದರೆ ನೀವೇ ನನ್ನನ್ನು ಬುದ್ಧಿಹೀನನನ್ನಾಗಿ ಮಾಡಿದ್ದೀರ ಎಂದು ಹೇಳಲು ನಿಮ್ಮ ಅನುಮತಿಯನ್ನು ಬಯಸುತ್ತೇನೆ. ನಾನು 1911 ರಲ್ಲಿ ನಿಮ್ಮಿಂದ ಓಡಿಹೋಗಿ ಬೇರೆಯಾಗಿದ್ದೆ. ಎರಡನೆಯ ಬಾರಿಗೆ ಮರಳಿ ಬರಲು ನೀವೇ ಕಾರಣ. 1906 ರಲ್ಲಿ ನನ್ನ ಹತ್ತೊಂಬತ್ತನೆಯ ವಯಸ್ಸಿಗೆ ನಾನು ನಿಮ್ಮೆದುರು ಅದೆಷ್ಟು ಪ್ರಾರ್ಥನೆಯನ್ನು ಮಾಡಿದ್ದೆ, ಕೈ ಮುಗಿದು, ನಾನು ವಿದ್ಯಾಭ್ಯಾಸವನ್ನು ಮಾಡಲು ಬಯಸುತ್ತೇನೆ ಎಂದು ಕೇಳಿಕೊಂಡಿದ್ದೆ. ನಾನಾಗ ರೋದಿಸಿದೆ, ಅಂಗಲಾಚಿದೆ, ಆದರೆ ...ಆದರೆ...ನೀವು ಕಿವಿಗೊಡಲಿಲ್ಲ. ನೀವು ಎಲ್ಲರ ಮಾತನ್ನು ಅಲ್ಲಗೆಳೆದು ಹತ್ತೊಂಭತ್ತನೆಯ ವಯಸ್ಸಿಗೆ ವಿದೇಶಕ್ಕೆ ಹೋಗಿದ್ದೀರಿ, ಇದನ್ನು ನಾನು ನೆನಪಿಸಿಕೊಳ್ಳುತ್ತೇನೆ.

ನಾನು ಫೀನಿಕ್ಸ್ ಆಶ್ರಮದಲ್ಲಿ ಬಾ ಅವರೊಂದಿಗೆ ನೀವು ವರ್ತಿಸುವುದನ್ನು ನೋಡಿದೆ. ನನ್ನ ತಾಯಿಯ ದುರ್ಗತಿಯಾಗುವುದನ್ನು ನೋಡಿದೆ. ಅವರಿಗೆ ಸದಾ ಅವಮಾನವಾಗುತ್ತಲೇ ಇತ್ತು. ಮಿಸೆಸ್ ಗಾಂಧಿ ಸಕ್ಕರೆಯನ್ನು ತುಂಬಾ ತಿನ್ನುತ್ತಾರೆ ಅಥವಾ ಹರಿಲಾಲ ಹಾಗೆ...ಹರಿಲಾಲ ಹೀಗೆ...' ಎಂಬ ದೂರುಗಳು ಬರುತ್ತಿದ್ದವು. ದೂರು ಸಲ್ಲಿಸುವವರ ಬಗ್ಗೆ ತಿಳಿಯದೇ ನಮ್ಮನ್ನೇ ದೋಷಿಯನ್ನಾಗಿ ಮಾಡಲಾಗುತ್ತಿತ್ತು. ನನ್ನ ತಾಯಿಯ ಬಗ್ಗೆ ಬಂದ ವಿಪತ್ತುಗಳನ್ನು ವರ್ಣಿಸುವ ಶಕ್ತಿ ನನ್ನಲ್ಲಿಲ್ಲ. ಸತ್ಯಾಗ್ರಹದ ಹೋರಾಟದಲ್ಲಿ ಗುರುತಿಸಿಕೊಂಡು ನಾನು ಜೈಲಿಗೆ ಹೋದೆ, ಆದರೂ ನಾನು ನಿಮ್ಮೊಂದಿಗೆ ನನಗೆ ತೋಚಿದಂತೆ ಮಾತನಾಡಲು ಬಯಸಿದಾಗ ನೀವು ಅದನ್ನು ಖಂಡಿಸಿದ್ದೀರ. ನನ್ನನ್ನು ಹದ್ದುಬಸ್ತಿನಲ್ಲೇ ಇಟ್ಟಿರಿ. ನಿಮಗೆ ದೂರು ಸಲ್ಲಿಸಿದಾಗ ನೀವು, 'ನಿನ್ನ ವಿಚಾರಗಳೊಂದಿಗೆ ನೀನೇಕೆ ಗಟ್ಟಿಯಾಗಲಿಲ್ಲ?' ಎಂಬ ಒಂದೇ ಉತ್ತರ ನನಗೆ ಸಿಗುತ್ತಿತ್ತು. ನಾನು ನನ್ನ ವಿಚಾರಗಳ ಬಗ್ಗೆ ದೃಢವಾಗಿದ್ದೇನೆ, ಗಟ್ಟಿಯಾಗಿದ್ದೇನೆ, ಗಟ್ಟಿಯಾಗಿರುತ್ತೇನೆ. ನಿಮಗೆ ಹೋಲಿಸಿದಾಗ ನನ್ನ ಜೀವನ ಇನ್ನೂ ದೀರ್ಘವಾಗಿದೆ; ನಾನು ಸಾಯುವಾಗ ಸಂತೋಷದಿಂದ ಸಾಯುತ್ತೇನೆ. ನನ್ನ ಅಂತಃಕರಣದಲ್ಲಿ ಪಾಪಪ್ರಜ್ಞೆ ಇಲ್ಲವೆಂಬುದು ನನಗೆ ತಿಳಿದಿದೆ. ನಾನು ನನ್ನ ಜೀವನನಿರ್ವಹಣೆಗೆ ಸಂಪಾದನೆ ಮಾಡುವ ದಿನದಿಂದ, ಎಲ್ಲರಿಗಿಂತ ಮುಂದೆ ಹೋಗಿ ದೇಶದ ಸೇವಕನಾಗುತ್ತೇನೆ.

ವಿದೇಶಕ್ಕೆ ಹೋಗಿ ಬ್ಯಾರಿಸ್ಟರ್ ಆಗುವ ನನ್ನಿಚ್ಛೆಯನ್ನು ನೀವೆಂದೂ ಈಡೇರಿಸಲಿಲ್ಲ. ಪ್ರತಿಯಾಗಿ, ಸೋರಾಬಜಿ ಒಳ್ಳೆಯ ಕೆಲಸವನ್ನು ಮಾಡುತ್ತಾನೆಂದು ಯೋಚಿಸಿ ಅವನನ್ನು ವಿದೇಶಕ್ಕೆ ಕಳುಹಿಸಿದಿರಿ. ನನ್ನ ಹೋಲಿಕೆಯಲ್ಲಿ ಒಬ್ಬ ತುಚ್ಛ ವ್ಯಕ್ತಿಯನ್ನು ಸಂತೋಷಪಡಿಸಲು ಪ್ರಯತ್ನಿಸಿದಿರಿ.

ನಾನು ನಿಮ್ಮಿಚ್ಛೆಗೆ ವಿರುದ್ಧವಾಗಿ ವಿವಾಹವಾದೆ ಎಂದು ನೀವು ನನ್ನನ್ನು ದೂಷಿಸುತ್ತೀರಿ. ಇದನ್ನು ನಾನು ಒಪ್ಪುತ್ತೇನೆ. ನಾನು ನಿಮ್ಮ ಅಧೀನದಲ್ಲಿಯೇ ಇದ್ದೆ. ನಾನು ಮದುವೆಯಾಗಿ ಒಂಬತ್ತು ವರ್ಷಗಳು ಸಂದಿವೆ. ಈ ಒಂಬತ್ತು ವರ್ಷಗಳಲ್ಲಿ ನಾನು ಆರು ವರ್ಷ ವಿರಹಿಯಂತೆ ದಿನಗಳನ್ನು ಕಳೆಯಬೇಕಾಯಿತು. 'ಉಪ್ಪು ತಿನ್ನಬೇಡ, ಸರಳ ಆಹಾರವನ್ನು ಸೇವಿಸು, ತುಪ್ಪ ತಿನ್ನಬೇಡ, ಹಾಲು ಕುಡಿಯಬೇಡ' ಎಂದು ನೀವು ಹೇಳುತ್ತಿದ್ದಿರಿ. ಆದರೆ ಈ ಪದಾರ್ಥಗಳನ್ನು ಸೇವಿಸುವುದರಿಂದ ನಾವು ನೈತಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂಬುದನ್ನು ಒಪ್ಪಲು ನಾನು ಸಿದ್ಧನಿಲ್ಲ. ಫೀನಿಕ್ಸ್ ಆಶ್ರಮದಲ್ಲಿ ನಾನು ಒಂದು ಸೂತ್ರ ಮಾತ್ರ ಜಾರಿಯಾಗುವುದನ್ನು ನೋಡಿದ್ದೆ; ಅದೇನೆಂದರೆ, 'ವರ ಸಾಯಲಿ, ಕನ್ಯೆ ಸಾಯಲಿ, ಬಾಪೂ ಹೇಳಿದಂತೆ ಕೇಳಿ.'

ಛಗನ್‌ಲಾಲ್, ಮಗನ್‌ಲಾಲ್ ಮತ್ತು ಜಮನಾದಾಸ್ ಇವರು ಮನೆಯಿಂದ ನೈತಿಕತೆಯ ಬಂಡವಾಳವನ್ನು ಕಟ್ಟಿಕೊಂಡು ನಿಮ್ಮ ಬಳಿಗೆ ಬಂದಿದ್ದಾರೆ. ಅವರು ಆ ಬಂಡವಾಳವನ್ನು ನಿಮಗೊಪ್ಪಿಸಿ, ನಿಮ್ಮೊಂದಿಗೆ ವ್ಯವಹರಿಸುತ್ತಿದ್ದಾರೆ. ನೀವು ನನಗೆ ಆ ಬಂಡವಾಳವನ್ನು ಕೊಟ್ಟೇ ಇರಲಿಲ್ಲ. ಇದೇ ನನ್ನ ಹಣೆಬರಹವಾಗಿದೆ. ನಾನು ದಲ್ಲಾಳಿಯ ಕೆಲಸವನ್ನು ಮಾಡಲು ಬಯಸಿದರೆ ಜನ ನನ್ನನ್ನು ಗೇಲಿ ಮಾಡುತ್ತಾರೆ. ಬಾಪೂಜಿ, ನಾನು ಅಗಸನ ನಾಯಿಯಾಗಿದ್ದೇನೆ, ನಾನೆಲ್ಲೂ ಸಲ್ಲುತ್ತಿಲ್ಲ. ನಾನು ಮಾಡುವುದಾದರೂ ಏನು? ಈ ವಯಸ್ಸಿನಲ್ಲಿ ನಿಮಗೆ ಚಿಕ್ಕ ಮಗುವಿನಂತೆ ಪತ್ರ ಬರೆಯಬೇಕಾಗಿ ಬಂದಿದೆ. ಇದರಿಂದ ನನ್ನ ಮನಸ್ಸಿಗೆ ತುಂಬಾ ದುಃಖವಾಗುತ್ತಿದೆ. ನಿಮ್ಮ ನಡೆನುಡಿ ತುಂಬಾ ಕಷ್ಟ; ನಾನು ಅದಕ್ಕೆ ಯೋಗ್ಯನಾಗಲು ಸಾಧ್ಯವಿಲ್ಲ. ಮಕ್ಕಳನ್ನು ಸಹಿಸಿಕೊಳ್ಳಬೇಕಾದ್ದದ್ದು ನ್ಯಾಯವೇ ಆಗಿದೆ, ಆದರೆ ನಾನು ದುರದೃಷ್ಟವಂತ, ಸಹಿಸಿಕೊಳ್ಳದಾದೆ.

ಇಷ್ಟೆಲ್ಲಾ ಆದರೂ ನಿಮ್ಮ ಆದೇಶ ಸಿಕ್ಕರೆ ನಾನು ಫೀನಿಕ್ಸ್ ಸಂಸ್ಥೆಯೊಂದಿಗೆ ನನ್ನನ್ನು ತೊಡಗಿಸಿಕೊಳ್ಳಲು ಸಿದ್ಧನಿದ್ದೇನೆ. ನಾನು ನಿಮ್ಮ ಆದೇಶವನ್ನು ಬೇಕಂತಲೇ ಉಲ್ಲಂಘಿಸಿಲ್ಲ. ನನ್ನ ಅಭಿಪ್ರಾಯಗಳು ತುಂಬಾ ಅನುಚಿತವಾಗಿವೆ; ಆದರೆ ಅವು ಸುಳ್ಳಾಗಲಿ, ನಾನು ಭವಿಷ್ಯದಲ್ಲಿ ಎಂದೂ ನನ್ನ ತಪ್ಪನ್ನು ತಿದ್ದಿಕೊಳ್ಳದಂತೆ ಇರಬಾರದು. ನನ್ನ ಅಂತಃಕರಣದ ಆಳದಲ್ಲಿ, ನಾನು ನಿಮ್ಮ ಮಗ ಎಂಬ ಒಂದೇ ಒಂದು ವಿಚಾರ ಕಲೆತಿದೆ. ನಿಮ್ಮ ಪುತ್ರನಾಗಿರಲು ಯೋಗ್ಯನಾದರೆ... ನೋಡೋಣ...

ನಿಮ್ಮ ಆಜ್ಞಾಪಾಲಕ ಪುತ್ರ, ಹರಿಲಾಲನ ಸಾಷ್ಟಾಂಗ ನಮಸ್ಕಾರಗಳು. ಪತ್ರವನ್ನು ಬರೆದು ಮುಗಿಸಿದ ನಂತರ ಕವರ್ ಮೇಲೆ ಹರಿಲಾಲ ಬರೆದ 'ನನ್ನ ತಂದೆ ಎಂ.ಕೆ.ಗಾಂಧಿ (ಬಾರ್‌ಎಟ್‌ಲಾ) ಅವರ ಹೆಸರಿಗೆ ನನ್ನ ಬಹಿರಂಗ ಪತ್ರ.'

ಹರಿಲಾಲ ಪತ್ರವನ್ನು ಇನ್ನೊಮ್ಮೆ ಓದಿದ. ಒಂದು ಶಬ್ದವನ್ನೂ ಸುಧಾರಣೆ ಮಾಡಿ ಬರೆಯಬೇಕೆಂದು ಅವನಿಗೆ ಅನ್ನಿಸಲಿಲ್ಲ. ಅವನ ಮನಸ್ಸಿಗೆ ನಿರಾಸೆ ಕವಿಯಿತು. ಹೇಳಬೇಕಾದುದ್ದನ್ನೆಲ್ಲಾ ಹೇಳಿದೆ ಎಂದು ಸಮಾಧಾನಗೊಂಡ. ಅವನೊಂದು ಪಟ್ಟಿಯನ್ನು ತಯಾರಿಸಿದ, ಅದರಲ್ಲಿ ಬಾಪೂ ಅವರನ್ನು ಹೊರತುಪಡಿಸಿ, ಬೇರೆ ಯಾರುಯಾರಿಗೆ ಹಾಗೂ ಪರಿವಾರದ ಸದಸ್ಯರಿಗೆ ಈ ಪತ್ರದ ಪ್ರತಿಯನ್ನು ಕಳುಹಿಸಬೇಕು ಎಂಬುದನ್ನು ಬರೆದ. ಮರುದಿನ ಆ ಪತ್ರದ ಪ್ರತಿಗಳನ್ನು ಮುದ್ರಿಸಿ ಕೊಂಡ, ತನಗೆ ತಿಳಿದಿದ್ದ ವಿಳಾಸಗಳಿಗೆ, ಅವರ ಹೆಸರಿಗೆ ಈ ಪತ್ರದ ಪ್ರತಿಗಳನ್ನು ಕಳುಹಿಸಿದ. ಸಾಕಷ್ಟು ಸಮಯದಿಂದ ಗರ್ಜಿಸುತ್ತಿದ್ದ ಮೋಡ ಇದ್ದಕ್ಕಿದ್ದಂತೆ ಮಳೆಗರೆದು ಹಗುರವಾದಂತೆ ತೋರಿತು.

ಆ ವೇಳೆಯಲ್ಲಿ ಬಾಪೂ ಕಲ್ಕತ್ತಾದಲ್ಲಿದ್ದರು. ಹರಿಲಾಲ ಕಳುಹಿಸಿದ್ದ ಪತ್ರವನ್ನು ಓದಿ ಅವರು ತುಂಬಾ ಬೇಸರಗೊಂಡರು. ಹರಿಲಾಲನ ಮನಸ್ಸಿನಲ್ಲಿ ಮನೆ ಮಾಡಿ ಕೂತಿದ್ದ ಕಹಿಯ ಪದರುಗಳನ್ನು ನೋಡಿ ಅವರ ವ್ಯಥೆ ಮಿತಿ ಮೀರಿ ಹೆಚ್ಚಿತು. ಹರಿಲಾಲನ ಬಗ್ಗೆ ಅವರಿಗಿದ್ದ ಸಂಬಂಧವನ್ನು ನೆನೆದು ಮನಸ್ಸು ತುಂಬಿ ಬಂತು. ಅವರು ಪತ್ರವನ್ನು ಓದಿ ಅದನ್ನು ಒಂದು ಕಡೆ ಇಟ್ಟರು, ನಂತರ ತಟಸ್ಥರಾಗಿ ಹೇಳಿದರು.

(ಸಶೇಷ)